
ಎಂದರೆ ವಾರಕ್ಕೊಂದಾದರೂ ಚಿತ್ರ ನೋಡಲೇಬೇಕೆನ್ನುವ ಸಿನಿಕರಿಗೆ ಮೀಸಲು ಈ ಜಾತಿ. ಇವರಲ್ಲಿ ಮೀಸಲಾತಿ.. ಕೆಟಗರಿಗಳೆಲ್ಲ ಇವೆ. ಕಮರ್ಷಿಯಲ್ ಚಿತ್ರದ ಎರಡು ಫೈಟಿಂಗ್, ನಾಲ್ಕಾರು ಹಾಡುಗಳ ಪ್ರೇಮಕಥೆ ಇಷ್ಟಪಡುವ ಜನರೇ ಬೇರೆ. ಕಲಾತ್ಮಕ ಚಿತ್ರಗಳನ್ನು ನೋಡಿ ತಮ್ಮ ವಿಚಾರಶಕ್ತಿಯನ್ನು ಒರೆಗೆ ಹಚ್ಚುವ ಜನರ ವರ್ಗವೇ ಬೇರೆ. ಐತಿಹಾಸಿಕ ಚಿತ್ರಗಳು, ಸಂಗೀತ, ನೃತ್ಯಮಯ ಚಿತ್ರಗಳು, ಕ್ರೈಮ್ ಥ್ರಿಲ್ಲರ್‌ಗಳು ತಮ್ಮದೇ ಪ್ರೇಕ್ಷಕರನ್ನು ಹೊಂದಿವೆ. ತಮ್ಮ ಮೆಚ್ಚಿನ ನಾಯಕನ ಚಿತ್ರವನ್ನು ಮೊದಲ ದಿನ, ಮೊದಲ ಶೋ ನೋಡಲು ಮುಗಿ ಬೀಳುವವರ ಕೆಟಗರಿಯೇ ಬೇರೆ. ಕಟೌಟ್ ನಿಲ್ಲಿಸಿ ಕ್ಷೀರಾಭಿಷೇಕ ಮಾಡುವಷ್ಟು ತೀವ್ರವಾದ ಪ್ರೀತಿ. ನೂರನೇ ದಿನ, ಐವತ್ತನೇ ದಿನದ ಸಂಭ್ರಮಾಚರಣೆಗಳು ಕಳೆಗಟ್ಟುತ್ತವೆ. ಕೆಲವೊಂದು ಪಾತ್ರಗಳು ಮನದಲ್ಲಿ ಬೇರೂರಿದರೆ ಕೊನೆಯವರೆಗೂ ಮಾಸುವುದಿಲ್ಲ.

ಅಪ್ಪ ಹೇಳುತ್ತಿದ್ದ ಸಂಗತಿ ನೆನಪಾಗುತ್ತದೆ. ಅಂದಿನ ಕಾಲದ ಹಿರಿಯರಂತೆ ಅಜ್ಜನಿಗೆ ಸಿನಿಮಾ ಎಂದರೆ ಕೊಂಚವೂ ಇಷ್ಟವಿರಲಿಲ್ಲ. ಅಪ್ಪ ಸಂಗೀತಮಯ ಹಿಂದಿ ಚಿತ್ರ ಬೈಜುಬಾವ್ರಾ(ಭರತ್ ಭೂಷಣ, ಮೀನಾಕುಮಾರಿ)ವನ್ನು ಹದಿಮೂರು ಬಾರಿ ನೋಡಿದ್ದರಂತೆ. ಅಜ್ಜನಿಗೆ ವಿಪರೀತ ಕೋಪ ಉಕ್ಕಿ, "ಅಲ್ಲೇ ಸಾಯಿ..." ಎಂದು ಬೈದಿದ್ದಲ್ಲದೇ ರಾತ್ರಿ ಶೋ ನೋಡಿಕೊಂಡು ಬಂದವರಿಗೆ ಬಾಗಿಲನ್ನೇ ತೆರೆಯಲಿಲ್ಲ. ಅಪ್ಪ ಎದುರಿನ ಆಲದ ಮರದ ಕೆಳಗೆ ಗೊರಕೆ ಹೊಡೆಯುವುದನ್ನು ಕೇಳಿ ಎಬ್ಬಿಸಿಕೊಂಡು ಮನೆಯೊಳಗೆ ಕರೆದೊಯ್ದರಂತೆ.

ಕರ್ನಾಟಕದಲ್ಲಿ ರಾಜಕುಮಾರ್ ಸಿನಿಮಾಗಳ ಪ್ರೀತಿ ಅಮರ. ಮೊದಲು ನೋಡಿ ಬಂದರೆ ಏನೋ ಹೆಚ್ಚುಗಾರಿಕೆ. ಉಳಿದವರಿಗೆ ಒಂದಕ್ಷರವೂ ಬಿಡದಂತೆ ಕಥೆ ಹೇಳುವುದು, ನಾವೆಲ್ಲ ಕೇಳುವುದು.. ಯಾವುದೋ ಬೇರೆ ಲೋಕವನ್ನು ಪ್ರವೇಶಿಸಿದ ಅನುಭವ. ನನಗಾಗ ಎಂಟು ವರ್ಷಗಳಿರಬಹುದು. 'ಭಾಗ್ಯವಂತರು' ಚಿತ್ರದಲ್ಲಿ ರಾಜಕುಮಾರ್ ಸತ್ತಿದ್ದು ನೋಡಿ ನಮ್ಮ ಚಿಣ್ಣರ ಗ್ಯಾಂಗ್ ಗೋಳೋ ಎಂದು ಅತ್ತಿತ್ತು. 'ಅದು ಬರೀ ಪಾತ್ರ... ನಟನೆ' ಎಂದು ಸಂತೈಸಿ ಹೇಳುವಲ್ಲಿ ಹಿರಿಯರು ಸುಸ್ತಾಗಿದ್ದರು. ರೇಡಿಯೊದಲ್ಲಿ ಬರುವ ಚಿತ್ರಗೀತೆಗಳನ್ನು ಬರೆದುಕೊಳ್ಳುವ ಹುಚ್ಚು. ಯಾವಾಗಲೂ ನೋಟ್‌ಬುಕ್ಕು, ಪೆನ್ಸಿಲ್ ಸಿದ್ಧವಾಗಿಟ್ಟುಕೊಂಡಿರುತ್ತಿದ್ದೆವು. ಈಗೇನೂ ಕಷ್ಟವಿಲ್ಲ. ಎಲ್ಲ ಸಿದ್ಧ ಸರಕು ಸಿಗುತ್ತದೆ. ಮನೆಯಲ್ಲಿ ಕುಳಿತೇ ಅಮೆಜಾನ್ ಪ್ರೈಮ್ ಮುಂತಾದವುಗಳಲ್ಲಿ ದೇಶ, ವಿದೇಶಗಳ ಬೇಕಾದ ಚಿತ್ರ ನೋಡಬಹುದು. ಆದರೆ, ಸಿನಿಮಾ ಕೂಡ ಬಹು ದೊಡ್ಡ ಉದ್ಯಮ. ತೆರೆಯ ಮೇಲೆ ಮಿಂಚುವವರಿಗಿಂತ ತೆರೆಯ ಹಿಂದೆ ದುಡಿಯುವವರ ಸಂಖ್ಯೆ ಜಾಸ್ತಿ. ಒಳ್ಳೆಯ ಚಿತ್ರಗಳನ್ನು ಪ್ರೋತ್ಸಾಹಿಸಿದರೆ ಚಿತ್ರರಂಗ ಬೆಳಗಬಹುದು. ಆದರೂ ಎಲ್ಲ ಸಲೀಸಾಗಿ ಕೈಗೆಟುಕುವ ಇಂದಿನ ದಿನಗಳಲ್ಲಿ ಅಂದಿನ ಉತ್ಸಾಹ ಮಾತ್ರ ದೊರೆಯುವುದಿಲ್ಲ.



ತಟ್ಟೆಯಲ್ಲಿ ಆಹಾರ ಪೋಲು ಮಾಡದಂತೆ ಊಟ ಮಾಡುವವರದ್ದೊಂದು ಭಿನ್ನ ಜಾತಿ. ತಟ್ಟೆಯಲ್ಲಿ ಬೇಕಾದಷ್ಟೇ ಹಾಕಿಸಿಕೊಂಡು ಚೆಲ್ಲದೆ ತಟ್ಟೆ ಖಾಲಿ ಮಾಡಿ ಏಳುವುದು ಒಳ್ಳೆಯ ಪರಿಪಾಠವೆಂದೇ ಹೇಳಬೇಕು. ಮೇಲಿನ ಸಾಲಿನಲ್ಲಿ ಬಡಿಸಿದ